**ಸಿ.ಸಿ.ನಂ. 2300/2022**

ಪಿ.ಡಬ್ಲ್ಯೂ: 1

ಸಿ.ಡಬ್ಲ್ಯೂ: 1

**ದಿನಾಂಕ: 04-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : ಆರೋಪಿ ಪರ** ಶ್ರೀ ಬಿ ಎನ್ ಕೆ **ವಕೀಲರಿಂದ.**

ನನ್ನ ಗಂಡನಿಗೂ ಮತ್ತು ಅವರ ಅಣ್ಣನಿಗೂ ಮತ್ತು ಆರೋಪಿ ಅವರ ತಾಯಿಗೂ 25 ವರ್ಷಗಳ ಹಿಂದೆ ವಿಭಾಗ ಆಗಿರುತ್ತದೆ ಎಂದರೆ ಸರಿ. ನಾವು ಈಗ ಮನೆ ಕಟ್ಟಲು ಹೋದ ಜಾಗ ನನ್ನ ಗಂಡನ ಹೆಸರಿನಲ್ಲಿರುವ ಬಗ್ಗೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆ ಸ್ವತ್ತು ಆರೋಪಿ ಮತ್ತು ಅವರ ಗಂಡನಿಗೆ ಸೇರಿದ ಸ್ವತ್ತು ಆಗಿರುತ್ತದೆ ಎಂದರೆ ಸರಿ. ಸದರಿ ಸ್ವತ್ತನ್ನು ನಿಮಗೆ ಕೊಡಲು ಆರೋಪಿ ಹತ್ತಿರ ಒತ್ತಾಯ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಆರೋಪಿಯು ನಿಮಗೆ ಮನೆ ಕಟ್ಟಲು ಸದರಿ ಜಾಗವನ್ನು ಕೊಡದ ಕಾರಣ ಆರೋಪಿ ಮತ್ತು ಅವರ ಗಂಡನ ಮೇಲೆ ನೀವು ಸುಳ್ಳು ದೂರನ್ನು ನೀಡಿರುತ್ತೀರಾ ಎಂದರೆ ಸರಿಯಲ್ಲ. ಗಲಾಟೆ ನಡೆಯಿತು ಎಂದು ಹೇಳುವ ಜಾಗದಲ್ಲಿ ಅಕ್ಕಪಕ್ಕ ಮನೆಗಳು ಇವೆ ಎಂದರೆ ಸರಿ. ಗಲಾಟೆ ನಡೆಯುವ ಸಂದರ್ಭದಲ್ಲಿ ಅಕ್ಕಪಕ್ಕದ ಮನೆಯವರು ಬರುತ್ತಾರೆಂದರೆ ಸಾಕ್ಷಿ ಗಲಾಟೆ ನಡೆಯುವಾಗ ಯಾರೂ ಇರಲಿಲ್ಲ ಎಂದು ನುಡಿದಿರುತ್ತಾರೆ. ಆರೋಪಿಗೆ ವಯಸ್ಸಾಗಿರುವ ಕಾರಣ ಅವರಿಗೆ ಓಡಾಡಲು ಕಷ್ಟವಾಗಿದೆ ಎಂದರೆ ಸಾಕ್ಷಿ ಅವರು ಪುಷ್ಟಿಯಾಗಿರುತ್ತಾರೆಂದು ನುಡಿದಿರುತ್ತಾರೆ. ಆಸ್ತಿಯನ್ನು ನಿಮ್ಮ ಹೆಸರಿಗೆ ಮಾಡಿಕೊಡಲು ಆರೋಪಿಗೆ ಒತ್ತಡ ನೀಡಿ ಅವರು ಮಾಡದ ಕಾರಣ ಆರೋಪಿಯ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೀರಾ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**